ಹಾಗೆ ಕವಿತೆ ಬಯಸುವ ಕೆಲವರಿಗೆ ಅವರ ಕಾವ್ಯ ಎಟುಕದ ದ್ರಾಕ್ಷಿಯಾಯ್ತು. ಕೊಂಚ ತಡವಾಗಿ ಅನ್ನಿಸುವ (ಅವರ ಮೂವತ್ತಮೂರನೇ ವಯಸ್ಸಿಗೆ) ಪ್ರಕಟಗೊಂಡ 'ಸಿಕಾಡ'ದ ಅವರ ತಯಾರಿ ಗಟ್ಟಿಯಾದದ್ದಾಗಿತ್ತು. ಅದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಾಗ ಪ್ರಕಟಿಸಿದ ನಮಗೂ ಹೆಮ್ಮೆಯಾಗಿತ್ತು.

'ಸಿಕಾಡ', 'ಪ್ಯಾಂಜಿಯಾ' ಮೊದಲಾದ ವಿಭಿನ್ನ ಹೆಸರಿನ ಕವನ ಸಂಕಲನಗಳ ಶೀರ್ಷಿಕೆಯ ಹಿಂದೆ ರವೀಂದ್ರರ ಬಹುಮುಖ ಆಸಕ್ತಿಗಳಿದ್ದವು. ಸಂಕಲನದಿಂದ ಸಂಕಲನಕ್ಕೆ ಗಟ್ಟಿಯಾಗಿ ಬೆಳೆಯುತ್ತಾ ಬಂದ ಕವಿ ರವೀಂದ್ರ. ವಿಜ್ಞಾನ, ಕ್ರೀಡೆ, ಸಂಗೀತ, ರಾಜಕೀಯ, ಎಲ್ಲವನ್ನೂ ವಿಸ್ತಾರವಾದ ಓದನ್ನೂ ತಮ್ಮ ಕಾವ್ಯಕ್ಕೆ ಅವರು ಬಳಸಿಕೊಂಡರು. ಕವಿಯಾಗಿ ಅವರ ತಯಾರಿ ಮತ್ತು ಬರವಣಿಗೆಯ ಬಗ್ಗೆ ಅವರಿಗಿದ್ದ ನಿಷ್ಠೆ ಅನುಕರಣೀಯ. "ನಾನು ಈ ಕಾವ್ಯ ನನಗೇಕೆ 'ಇಷ್ಟವಾಗಿದೆ' ಅಂದುಕೊಳ್ಳುತ್ತೇನೆ, ಹೊರತು ಅರ್ಥವಾಗಿದೆ ಎಂದಲ್ಲ. ನನ್ನ ಅರಿವಿನ ಮಿತಿಯೊಳಗೆ ಕಾವ್ಯದೊಂದಿಗೆ ಕವಿ ನಡೆಸಿದ ಹುಡುಗಾಟ–ಹುಡುಕಾಟವನ್ನು ನಾನು ಕೈಗೊಂಡು ಖುಷಿಪಟ್ಟಿದ್ದೇನೆ" ಎಂದು ಅವರ ನಾಲ್ಕನೇ ಸಂಕಲನ 'ಒಂದು ನೂಲಿನ ಜಾಡು'ವಿಗೆ ಮುನ್ನುಡಿ ಬರೆದ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಅಭಿಪ್ರಾಯಪಡುತ್ತಾರೆ. ಹೆಚ್ಚು ಸಾಂದ್ರವಾದ ಮೊದಲ ಓದಿಗೇ ಬಿಡಿಸಿಕೊಳ್ಳದ ಕವಿತೆಗಳನ್ನು ಬರೆದ ರವೀಂದ್ರಕುಮಾರ್ ಪ್ರತಿಮೆಯೊಂದರ ಸುತ್ತ ಹೆಣೆಯಲ್ಪಟ್ಟ ಪರಿಚಿತ ವಿವರಗಳಿಂದ ಸಾಂದರ್ಭಿಕ ಮೀಟುಗೋಲುಗಳಿಂದ ನಿಲುಕಬಲ್ಲ ಕವಿತೆಗಳ ರಚನೆ ಬಗ್ಗೆ ಅಂಥ ಆಸಕ್ತಿ ತೋರಲಿಲ್ಲ.

ಒಮ್ಮೆ ಅವರ ಮೈಸೂರು ಮನೆಯ ರೂಪಾ ನಗರದ ನಿರ್ಜನ ರಸ್ತೆಗಳಲ್ಲಿ ಅವರ ದಾಪುಗಾಲಿನ ನಡಿಗೆಗೆ ನನ್ನ ಓಡುವಿಕೆಯನ್ನು ಜೋಡಿಸಿಕೊಳ್ಳುತ್ತಾ ಏದುಬ್ಬಸದಲ್ಲಿ ಈ ವಿಚಾರ ಅವರೊಂದಿಗೆ ಬೆಳಗಿನ ಬಿರುನಡಿಗೆಯಲ್ಲಿ ಚರ್ಚಿಸಿದ್ದರ ನೆನಪು. ಮತ್ತೊಮ್ಮೆ ಅವರ ಕಾವ್ಯದ ಬಗ್ಗೆ ನಡೆದ ಒಂದು ಚರ್ಚೆಯಲ್ಲಿ ಹೀಗೇ ಬಿಡುಬೀಸಾಗಿ ವಿಷಯ ಮಂಡಿಸಿ, ನನ್ನ ಜೊತೆಗಿನ ಭಾಷಣಕಾರರು ಹಾಗೂ ಸಂಘಟಕರ ಕೋಪಕ್ಕೂ ತುತ್ತಾಗಿದ್ದು ನೆನಪಾಗುತ್ತಿದೆ. ಮತ್ತೊಮ್ಮೆ ದಸರಾ ಕವಿಗೋಷ್ಠಿಯಲ್ಲಿ ಅಧ್ಯಕ್ಷರ ದೀರ್ಘ ಭಟ್ಟಂಗಿ ಭಾಷಣ ಖಂಡಿಸಿ ಪ್ರತಿಭಟಿಸಿದ್ದೆ; ಮಾರನೆಯ ದಿನದ ಭೇಟಿಯಲ್ಲಿ, "ನಿಮ್ಮ ಮಗನನ್ನ ಗಲಾಟೆ ಮಾಡ್ತಾನೆ ಅಂತ ಮನೆಯಲ್ಲಿ ಬಿಟ್ಟು ಬಂದವರು, ನೀವೇ ಗಲಾಟೆ ಮಾಡ್ತಿದೀರ" ಅಂತ ತಮಾಷೆ ಮಾಡಿದ್ದರು. ಸಾಹಿತ್ಯದ ಸಹಯಾನದಲ್ಲಿ ಮೊಗೆದಷ್ಟು ಇವೆ ನೆನಪುಗಳು.

ಮತ್ತೊಂದು ಪ್ರಯೋಗ 'ಸಂಕಿರಣ'; 'ಸಂಚಯ' ಸಾಹಿತ್ಯ ಪತ್ರಿಕೆಯಲ್ಲಿ ಆ ಕಾಲಕ್ಕೆ ಬರೆಯುತ್ತಿದ್ದ, ಆದರೆ ಹೆಚ್ಚು ಚರ್ಚೆಯಾಗದ ಲೇಖಕರ ಬಗ್ಗೆ ಕಿರಿಯ ಲೇಖಕರು ಒಂದೊಂದು ಕೃತಿಯ ಬಗ್ಗೆ ಒಬ್ಬೊಬ್ಬರು ಬರೆಯುವುದು, ಜೊತೆಗೆ ಲೇಖಕರು ತಮ್ಮ ಬರವಣಿಗೆಯ ಬಗ್ಗೆ ತಾವೇ ಬರೆಯುವುದು. ಕವಿಗಳಾಗಿದ್ದರೆ ಅವರ ಕೆಲವು ಹೊಸ ಕವಿತೆಗಳು... ಇವುಗಳ ಒಂದು ಗುಚ್ಛವೇ 'ಸಂಕಿರಣ'. ರವೀಂದ್ರಕುಮಾರರ ಕಾವ್ಯದ ಬಗ್ಗೆಯೂ ಒಂದು ಸಂಚಿಕೆಯಲ್ಲಿ ಈ ಚರ್ಚೆ ನಡೆಸಿದ್ದೊಂದು ಮೈಲಿಗಲ್ಲು. ಇವರ ಜೊತೆಗೇ ಆನಂದ ಝುಂಜರವಾಡ, ಸವಿತಾ ನಾಗಭೂಷಣ, ಪ್ರತಿಭಾ ನಂದಕುಮಾರ, ಎಸ್.ಜಿ. ಸಿದ್ಧರಾಮಯ್ಯ ಮೊದಲಾದವರ ಕಾವ್ಯ ಕುರಿತು ಬರೆಯಲಾಗಿತ್ತು. ಸಾಹಿತ್ಯಿಕವಾಗಿ ಹೆಚ್ಚು ಚರ್ಚೆಯಾಗದೇ ಉಳಿದ, ಆ ಕಾಲಕ್ಕೆ ಬರೆಯುತ್ತಿದ್ದ ಲೇಖಕರ ಬಗ್ಗೆ ಕೆಲ ಮಟ್ಟಿಗಿನ ಚರ್ಚೆ ಸಾಧ್ಯವಾಯಿತು.

"ಈ ಕವಿ ಕನ್ನಡ ಕವಿಗಳೊಂದಿಗೆ ಇದ್ದರೆ. ಸರಿ, ಇವರು ಕನ್ನಡ ಕಾವ್ಯದೊಂದಿಗೆ ಎಲ್ಲಿ ನಿಲ್ಲುತ್ತಾರೆ ಎಂಬ ಪ್ರಶ್ನೆ ತೀರಾ ಆತುರದ್ದು. ಏಕೆಂದರೆ, ಕವಿಯು ಇನ್ನೂ ಬರೆಯಬೇಕಾದುದು ಇದೆ ಎಂದೇ ಬರೆಯುತ್ತಿರುವವರು. ಬರೆದಿರುವುದನ್ನೇ ಹಿಡಿದುಕೊಂಡು ಜಾಗ ಹುಡುಕಿದರೆ ಇವರ ಜಾಗ ಸಿಗುವುದು ಸುಮಾರು ಜನ ಸಮರ್ಥ ಕವಿಗಳ ನಡುವೆ. ಇವರ ಕಾವ್ಯ ಪ್ರಣಾಳಿಕೆ ಯಾವುದು?